(7) ಪೋಡೇಸ್ ಕಂಪನಿಯವರು ಗೌರಿಬಿದನೂರಿನ ಹತ್ತಿರ ಪಿನಾಕಿನಿ ನದಿ ಭಾಗದಿಂದ ಮರಳನ್ನು ಸಾಗಿಸಿರುವುದರಿಂದುಂಟಾಗಿರುವ ತೊಂದರೆ

ಶ್ರೀ ಯು. ಭೂಪತಿ.—'ಪೋಡೇಸ್ ಕನ್‌ಸ್ಟ್ರಕ್ಷನ್ ಕಂಪನಿ' ಯವರು ಗೌರಿಬಿದನೂರು ಪಿನಾಕಿನಿ ನದಿ ಭಾಗದಿಂದ ಸಂಮಾರು ಎಂಟು ಸಾವಿರ ಲಾರಿ ಲೋಡ್‌ಗಳಷ್ಟು ಮರಳನ್ನು ಸಾಗಿಸಿ ಪ್ರಕೃತಿಯ ಸಮತೋಲನವನ್ನು ವಿನಾಶದ ದಾರಿಗೆ ತಳ್ಳಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ.

ಮರಳನ್ನು ಹೆಚ್ಚಿನಪ್ರಮಾಣದಲ್ಲಿ ಆ ನದಿ ಭಾಗದಿಂದ ತೆಗೆದುಕೊಂಡು ಹೋಗುವುದರಿಂದ, ಈಗಾಗಲೇ ಬರಗಾಲಕ್ಕೆ ತುತ್ತಾಗಿರುವ ಕೋಲಾರ ಜಿಲ್ಲೆಯ ಗೌರಿಬಿದನೂರು ಭಾಗದಲ್ಲಿರುವ ಭಾವಿಗಳು ಬತ್ತಿ ಹೋಗುತ್ತಿವೆ. ರೈತರಿಗೆ ತೊಂದರೆಯಾಗುತ್ತಿದೆ. ಅಲ್ಲದೆ ಈ ವಿಚಾರದಲ್ಲಿ ಪೋಡೆಯವರಿಗೆ ಹಲವು ಸಚಿವರುಗಳು ಸಹಾಯ ಮಾಡುವುದಾಗಿ ಭರವಸೆ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. (ಆಗಸ್ಟ್ ೧೧, ಲಂಕೇಶ್ ಪತ್ರಿಕೆ) ಮರಳು ಸಾಗಿಸುವ ಈ ಕೆಲಸವನ್ನು ತಡೆಯಲು ಪಯತ್ನಿಸಿದ ತಹಶೀಲ್ದಾರರನ್ನು ವರ್ಗಾವಣೆ ಮಾಡುತ್ತಾರೆಂಬ ವದಂತಿಯೂ ಇದೆ. ಸಾರ್ವಜನಿಕ ಮಹತ್ವದ್ದಾದ ಈ ವಿಷಯದಲ್ಲಿ ಸರ್ಕಾರದ ಕ್ರಮ ಏನೆಂಬುದನ್ನು ಮುಖ್ಯ ಮಂತ್ರಿಗಳು ಹೇಳಿಕೆ ಕೊಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್ ಜಾಲಪ್ಪ.—ಮರಳು ಸಾಗಿಸಿರುವುದು ನಿಜ. ಇದರ ಮೇಲೆ ತಹಶೀಲ್ದಾರರು ಕ್ರಮ ಕೈಗೊಂಡಿದ್ದಾರೆ. ಸದಸ್ಯರು ಹೇಳಿದ ಹಾಗೆ ಯಾವ ಮಂತ್ರಿಗಳೂ ಅವರಿಗೆ ರಕ್ಷಣೆ ಕೊಡುವುದಕ್ಕೆ ಹೊಗಿಲ್ಲ. ತಹಶೀಲ್ದಾರರನ್ನು ವರ್ಗ ಮಾಡುವುದಕ್ಕೂ ಹೋಗಿಲ್ಲ. ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದೇವೆ, ಮಿಕ್ಕಿದ್ದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ.

(8) ಮಂಡಗದ್ದೆ ಹೋಬಳಿ ವಲಯದಲ್ಲಿ ಅರಣ್ಯ ಅಧಿಕಾರಿಗಳು ರೈತರಿಗೆ ಕಿರುಕುಳ ನೀಡುತ್ತಿರುವುದು.

ಶ್ರೀ ಪಟಮಕ್ಕಿ ರತ್ನಾಕರ್.—ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಹೋಬಳಿ ವಲಯದಲ್ಲಿ ಅರಣ್ಯ ಅಧಿಕಾರಿಗಳು ರೈತರಿಗೆ ಬಹಳಷ್ಟು, ಕಿರುಕುಳ ನೀಡುತ್ತಿದ್ದಾರೆ. ರೈತರು ತಮ್ಮ ಗದ್ದೆಯ ಹಾಗೂ ತೋಟದ ಬೇಲಿಯನ್ನು ಹಾಕಲು ಬೇಲಿ ಗೂಟವನ್ನು ಉಪಯೋಗಿಸುತ್ತಾರೆ ಇಂತಹ ಸಣ್ಣ ಪುಟ್ಟ ಗೂಟಗಳನ್ನು ಕಡಿದರೆ ಅಧಿಕಾರಿಗಳು ರೈತರನ್ನು ಮಾನಸಿಕವಾಗಿಯೂ ದೈಹಿಕವಾಗಿಯೂ ತಂಬಾ ಅನಾಗರೀಕವಾಗಿ ಹಿಂಸಿಸುತ್ತಿದ್ದಾರೆ. ಹಣ ನೀಡುವವರು ಏನೇ ಮಾಡಿದರೂ ಅರಣ್ಯ ಅಧಿಕಾರಿಗಳ ಸಹಾಯ ಹಾಗೂ ಅಭಯ ಹಸ್ತ ಇದೆ. ಬಡ ರೈತರಿಗೆ ಮಾತ್ರ ಅರಣ್ಯ ಅಧಿಕಾರಿಗಳು ತಮ್ಮ ಕಾನೂನು ಪಾಂಡಿತ್ಯ ಮತ್ತು ಅರಣ್ಯ ರಕ್ಷಣೆಯ ಪ್ರಜ್ಞೆ ತೋರುಶ್ತಿದ್ದಾರೆ. ಈ ವಿಚಾರಗಳ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುತ್ತಿದ್ದೇನೆ. ನಮ್ಮ ಅರಣ್ಯ ಅಧಿಕಾರಿಗಳು ಎಷ್ಟು ಸಮರ್ಥರು ಎಂದರೆ ಕದಿಯುವವರನ್ನು ಬಿಟ್ಟು ಉಳಿದವರನ್ನು ಹಿಡಿಯುತ್ತಾರೆ.

ಶ್ರೀ ಬಿ. ಎ. ಜೀವಿಜಯ.—ಮಾನ್ಯ ರತ್ನಾಕರ್‌ರವರು, ಮಂಡಗದ್ದೆಯಲ್ಲಿ ರೈತರು ಬೇಲಿ ಗೂಟಗಳನ್ನು ಕಡಿಯಲು ಹೋದರೆ ಅರಣ್ಯಾಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆಂದು ಆಪಾದನೆ ಮಾಡಿದ್ದಾರೆ. ಅಂಥ ಕಿರುಕುಳ ಕೊಡತಕ್ಕ ಅಧಿಕಾರಿಗಳನ್ನು ವರ್ಗ ಮಾಡಿದೆ. ಬಹುಶಃ ಅದು ಅವರ ಗಮನಕ್ಕೆ ಬಂದಿರಬಹುದು. ಅವರು ಅರಣ್ಯ ರಕ್ಷಣೆ ಮಾಡಬೇಕೆಂದು ಕೂಡ ಹೇಳಿದ್ದಾರೆ. ಸಣ್ಣ ಸಣ್ಣ ಮರಗಳನ್ನು ಕಡಿದರೆ ಅದನ್ನು ತಡೆಗಟ್ಟುವುದು ಅರಣ್ಯಾಧಿಕಾರಿಗಳ ಜವಾಬ್ದಾರಿ. ಕಿರುಕುಳ ಕೊಟ್ಟಿರುವ ನಿರ್ದಿಷ್ಟ ಪ್ರಕರಣಗಳನ್ನು ಮತ್ತೆ ಏನಾದರೂ ತಿಳಿಸಿದರೆ ಅಂಥವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇವೆ.

(9) ಕಂದಾಯ ಇಲಾಖೆಯಲ್ಲಿ ಕಟ್ಟಡ ಕಟ್ಟಿದ್ದಕ್ಕೆ ದಂಡ ತೆರಲು ಮಾಡಿರುವ ಆಜ್ಞೆ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕ ಸರಕಾರ ರೆವಿನ್ಯೂ ಇಲಾಖೆಯಿಂದ ಸರ್ಕಾರದ ಆಜ್ಞೆಯೊಂದು ಕೆಲ ತಿಂಗಳ ಹಿಂದೆ ಹೊರಟಿದೆ. ಈ ಆಜ್ಞೆಯ ಪ್ರಕಾರ ಈಗಾಗಲೇ ಹತ್ತಾರು ವರ್ಷಗಳಿಂದ ತಮ್ಮ ತಮ್ಮ ಹೊಲಗಳಲ್ಲಿ ಕಟ್ಟಡ ಹಾಗೂವಾಸದ ಮನೆಗಳನ್ನು ಕಟ್ಟಿರುವ ಅಥವಾ ಕೃಷಿ ಉಪಯೋಗಕ್ಕಾಗಿ ಹಾಗೂ ನಗರಗಳ ದುಬಾರಿ ನಿವೇಶನದ ಬೆಲೆ ತೆರಲಾಗದೆ ಹತ್ತಾರು ಮೈಲಿ ದೂರ

ಹೋಗಿ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ಈ ಆಜ್ಞೆ ಭಯಾನಕವಾಗಿದೆ. ಈ ಆಜ್ಞೆಯಲ್ಲಿ ಕೃಷಿ ಭೂಮಿಯಲ್ಲಿ ವಾಸಕ್ಕೆ ಆಗಲಿ ಅಥವಾ ಬೇರೆ ಯಾವುದೇ ಉಪಯೋಗಕ್ಕಾಗಲಿ ಕಟ್ಟಡ ಕಟ್ಟಿರುವ ರೈತರುಗಳು ಪ್ರತಿ ಚದರ ಅಡಿಗೆ ೯ ರೂಪಾಯಿಯಿಂದ ೧೧–೫೦ ಪೈಸೆಯವರೆಗೆ ದಂಡವನ್ನು ತೆರಬೇಕಾಗುತ್ತದೆ ಅಂದರೆ ೪೦–೫೦ ಇರುವ ಒಂದು ಸಣ್ಣ ನಿವೇಶನದಲ್ಲಿ ಕಟ್ಟಿರುವ ಕಟ್ಟಡವನ್ನು ಸಕ್ರಮಗೊಳಿಸಬೇಕಾದಲ್ಲಿ ಈ ರೈತರುಗಳು ೧೧ ಸಾವಿರದಿಂದ ೧೫ ಸಾವಿರದವರೆಗೂ ದಂಡ ತೆರಬೇಕಾಗುತ್ತದೆ. ಅನೇಕ ಪ್ರದೇಶಗಳಲ್ಲಿ ಇದೇ ಹಣಕ್ಕೆ ಒಂದು ಎಕರೆ ಭೂಮಿಯನ್ನು ಕೊಳ್ಳಬಹುದು. ಇಂತಹ ಆಜ್ಞೆ ಹೊರಡಿಸಿದ ಸರ್ಕಾರ ಕಟ್ಟಡಗಳಿರುವ ಪ್ರದೇಶ ಅಳತೆ ಮಾಡಿ ಗ್ರಾಮ ಲೆಕ್ಕಿಗರ ಮೂಲಕ ನೋಟೀಸ್‌ಗಳನ್ನು ನೀಡಿ ವಸೂಲಿ ಆರಂಭಿಸಿದೆ. ಈ ಕ್ರಮ ರೈತ ವಿರೋಧಿಯಾದದ್ದು. ಬಡಜನರಿಗೆ ಸಂಕಟಕಾರಿಯಾದದ್ದು. ಈ ಕ್ರಮವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಇಲ್ಲದಿದ್ದರೆ ಹೊಲಗಳಲ್ಲಿ ಕಟ್ಟಡಗಳನ್ನು ಕಟ್ಟಿದ ಹತ್ತಾರು ಸಾವಿರ ಮಂದಿ ರೈತರ ಪ್ರತಿಭಟನೆಯನ್ನು ಸರ್ಕಾರ ಎದುರಿಸಬೇಕಾಗಿ ಬರುತ್ತದೆಂದು ಎಚ್ಚರಿಕೆ ನೀಡಿ ಈ ಮಹತ್ವಪೂರ್ಣ ವಿಷಯವನ್ನು ಸದನಕ್ಕೆ ತರಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಕಾನೂನು ಪ್ರಕಾರ ಕ್ರಮ ತೆಗೆದು ಕೊಂಡಿದ್ದೇವೆ. ಆ ಕಾನೂನು ಇಲ್ಲೇ ಆಗಿದೆ. ನೀವೆ ಸದಸ್ಯರು ಈ ರೀತಿ ಮಾಡಬಾರದೆಂದು ಹೇಳಿದರೆ ಕಾನೂನನ್ನು ಬಿಟ್ಟು ಬೇರೆ ಕ್ರಮ ಕೈಗೊಳ್ಳುವುದಕ್ಕೆ ಅವಕಾಶ ಇಲ್ಲ. ಹಾಗೇನಾದರೂ ಇದ್ದರೆ ವಿಚಾರ ಮಾಡೋಣ.

10. ಶಹಪುರ ತಾಲ್ಲೂಕಿನ ಹಾರನಗೇರಾ ವ್ಯವಸಾಯ ಸೇವಾ ಸಹಕಾರ ಸಂಘದ 58 ಮಂದಿಗೆ ಸಾಲವನ್ನು ವಿತರಣೆ ಮಾಡದಿರುವುದು.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ಗುಲ್ಬರ್ಗ ಜಿಲ್ಲೆ ಶಹಪುರ ತಾಲ್ಲೂಕಿನ ಹಾರನಗೇರಾ ವ್ಯವಸಾಯ ಸೇವಾ ಸಹಕಾರ ಸಂಘದ ೫೮ ಮಂದಿ ಸದಸ್ಯರು ಸಾಲ ವಂಚಿತರಾಗಿದ್ದು ಅವರಿಗೆ ೧೨–೬–೮೫ ರಂದು ಎನ್. ಸಿ. ಸ್ಟೇಟ್‌ಮೆಂಟ್, ಮಂಜೂರಾಯಿತು. ೧೫–೬–೮೫ ರಂದು ಸದಸ್ಯರಿಂದ ಪತ್ರ ವಗೈರೆ ಹಾಗೂ ಚೆಕ್ಕುಗಳಿಗೆ ಸಹಿ ತೆಗೆದುಕೊಳ್ಳಲಾಯಿತಾದರೂ ಸಾಲ ವಿತರಣೆ ಮಾಡಲಿಲ್ಲ. ಈ ವಿಷಯವನ್ನು ೨೬–೭–೮೫ ರಂದು ಜಿಲ್ಲಾಧಿಕಾರಿಯವರಿಗೆ ತಿಳಿಸಿದ್ದು ಅವರು ಎರಡು ದಿನಗಳೊಳಗೆ ಸಾಲ ಹಂಚುವಂತೆ ಆದೇಶ ನೀಡಿದ್ದಾಗ್ಯೂ ಈವರೆಗೂ ಸಾಲ ವಿತರಣೆ ಯಾಗಲಿಲ್ಲ. ೩–೮–೮೫ ರಂದು ಮೇಲ್ಕಂಡವರು ಪುನಃ ಜಿಲ್ಲಾಧಿಕಾರಿಯವರನ್ನು ನೋಡಿ ವಿಷಯ ತಿಳಿಸಿದ ನಂತರ ಜಿಲ್ಲಾಧಿಕಾರಿಯವರು ಗುಲ್ಬರ್ಗ ಉಪ ನೋಂದಣಾಧಿಕಾರಿಯವರಿಗೆ ಆದೇಶ ನೀಡಿ ದಿನಾಂಕ ೧೫–೮–೮೫ ರೊಳಗಾಗಿ ಸಾಲ ವಿತರಣೆ ಮಾಡಬೇಕೆಂದು ತಿಳಿಸಿದ್ದಾಗ್ಯೂ ಉಪ ನೋಂದಣಾಧಿಕಾರಿಯವರಾಗಲಿ ಸಂಬಂಧಪಟ್ಟ ಬ್ಯಾಂಕಿನವರಾಗಲಿ ಕ್ರಮ ತೆಗೆದುಕೊಳ್ಳದಿರುವುದರಿಂದ ಬರಗಾಲಕ್ಕೆ ಸಿಕ್ಕಿ ಬೇಸತ್ತಿರುವ ಮೇಲ್ಕಂಡ ರೈತರುಗಳಿಗೆ ಕೂಡಲೇ ಮಂಜೂರಾಗಿರುವ ಸಾಲವನ್ನು ಪಾವತಿ ಮಾಡುವಂತೆ ಸರ್ಕಾರದವರು ಆದೇಶ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಟೆಲಿಫೋನ್ ಮಾಡಿ ವಿತರಣೆ ಸಾಲ ವಿತರಣೆ ಆಗಿಲ್ಲವೆಂದು ಕೇಳಿ, ನಾಳೆ ಸದಸ್ಯರಿಗೆ ಉತ್ತರ ಒದಗಿಸುತ್ತೇನೆ.

(11) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಜಾಲಿಕೊಪ್ಪ ಗ್ರಾಮದ ನಿವಾಸಿಗಳ ಅಮರಣಾಂತ ಉಪವಾಸ ಮಾಡಿರುವುದು.

ಶ್ರೀ ಕೆ. ಪೆಚ್. ಪಾಟೀಲ್ (ಬಂಗಾರಪ್ಪ, ರಾಮಪ್ಪ, ಸ್ವಾಮಿರಾವ್, ಮಾಲಿಕಯ್ಯ, ಪುಟ್ಟ ಸ್ವಾಮಿ, ಮಲ್ಲಾರಿಗೌಡ ಎಸ್. ಪಾಟೀಲ್ ಇವರೆಲ್ಲರ ಪರವಾಗಿ).—ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಜಾಲಿಕೊಪ್ಪ ಗ್ರಾಮದ ನಿವಾಸಿಗಳಾದ ೧೨ ಮಂದಿ ಹರಿಜನರು ತಮ್ಮ ನ್ಯಾಯಪಾದ ಬೇಡಿಕೆಯಾದ ೧೩ ಎಕರೆ ಗ್ರಾಮ ಠಾಣ ಜಮೀನನ್ನು ಸಾಗುವಳಿಗಾಗಿ ಬಹಳ ಹಿಂದಿನಿಂದಲೂ ಕೋರುತ್ತಿದ್ದು ಸರಕಾರ ಈ ಬಗ್ಗೆ ಗಮನ ನೀಡದಿದ್ದುದರಿಂದ ಆಗಸ್ಟ್ ೧೫ ರಿಂದ ಅವರುಗಳು ಅಮರಣಾಂತರ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ೧೭–೮–೮೫ ರಂದು ಸಂಬಂಧಪಟ್ಟ ಅಧಿಕಾರಿಗಳು ಮೇಲ್ಕಂಡ ೧೩ ಎಕರೆ ಜಮೀನನ್ನು ಸ್ಮಶಾನಕ್ಕೆ ನೀಡಿರುವುದಾಗಿ ತಿಳಿಸಿದ್ದಾರೆ. ಜಾಲಿಕೊಪ್ಪ ಮತ್ತು ಆರವಳ್ಳಿ ಗ್ರಾಮಗಳು ತೀರಾ ಚಿಕ್ಕ ಗ್ರಾಮಗಳಿದ್ದು ಎರಡು ಎಕರೆಗಳಷ್ಟು ಜಮೀನನ್ನು ಸ್ಮಶಾನಕ್ಕೆ ಇಟ್ಟುಕೊಂಡು ಉಳಿದ ೧೧ ಎಕರೆ ಜಮೀನನ್ನು ಸಾಗುವಳಿಗೆ ಬಿಟ್ಟುಕೊಡಬೇಕೆಂದು ಉಪವಾಸ ಮಾಡುತ್ತಿ